Kannada Prabha

Date: 03-04-2021 Page No: 2

Edition: Mysore Language: Kannada

# ಉತ್ಪಾದನಾ ವಲಯದಲ್ಲಿ ವಿಶ್ವವನ್ನೇ ಆಳಲಿರುವ ಭಾರತ

## ಟೊಯೋಟ ಉಪ ವ್ಯವಸ್ಥಾಪಕ ಪರಶುರಾಮನ್




ಚಿನ್ನದ ಪದಕ ಪಡೆದ 6 ವಿದ್ಯಾರ್ಥಿಗಳೊಂದಿಗೆ ಟೊಯೋಟ ಇಂಡಸ್ಟ್ರೀಸ್ ಎಂಜಿನ್ ಇಂಡಿಯಾ ಪ್ರೈ.ಲಿ ಉಪ ವ್ಯವಸ್ಥಾಪಕ ನಿರ್ದೇಶಕ ಟಿ.ಆರ್. ಪರಶುರಾಮನ್.

• **ಕನ್ನಡಪ್ರಭ ವಾರ್ತೆ** ಮೈಸೂರು

ಭಾರತ ಬದಲಾವಣೆಯ ಹಾದಿಯಲ್ಲಿ ಸಾಗುತ್ತಿದ್ದು, ನಮ್ಮ ದೇಶವು ಇನ್ನು 10 ವರ್ಷಗಳಲ್ಲಿ ಉತ್ಪಾದನಾ ವಲಯದಲ್ಲಿ ವಿಶ್ವವನ್ನೇ ಆಳುತ್ತದೆ ಎಂದು ಟೊಯೋಟ ಇಂಡಸ್ಟ್ರೀಸ್ ಎಂಜಿನ್ ಇಂಡಿಯಾ ಪ್ರೈ.ಲಿ ಉಪ ವ್ಯವಸ್ಥಾಪಕ ನಿರ್ದೇಶಕ ಟಿ.ಆರ್. ಪರಶುರಾಮನ್ ತಿಳಿಸಿದರು.

ನಗರದ ಸಿದ್ಧಾರ್ಥನಗರದಲ್ಲಿರುವ ಎಸ್‌ಡಿಎಂ- ಐಎಂಡಿ ಕಾಲೇಜಿನಲ್ಲಿ ಶುಕ್ರವಾರ ನಡೆದ 26ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ನಮ್ಮ ದೇಶದಲ್ಲಿರುವಷ್ಟು ಯುವಜನತೆ ಬೇರೆ ಯಾವ ದೇಶದಲ್ಲೂ ಇಲ್ಲ. ಚೀನಾ, ಜಪಾನ್‌ನಲ್ಲಿ ಮೊದಲಾದ ದೇಶಗಳಲ್ಲಿ ಮಧ್ಯ ವಯಸ್ಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇದರ ಪರಿಣಾಮವಾಗಿ ಭಾರತ ಉತ್ಪಾದನಾ ವಲಯದಲ್ಲಿ ತನ್ನ ಛಾಪು ಮೂಡಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಯಾರು, ಯಾವಾಗ, ಎಲ್ಲಿ, ಏನನ್ನಾದರೂ ಕಲಿಯಬಹುದು. ನಮ್ಮ ಆಸಕ್ತಿಯ ವಿಷಯ ಕಲಿಯಲು ಅವಕಾಶ ಇಡೆ. ಜೊತೆಗೆ ಪ್ರಾಯೋಗಿಕ ಜ್ಞಾನ ಸಹ ಅಭಿವೃದ್ಧಿಯಾಗುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಬಂದ ನಂತರ ಭಾರತದ ವಿದ್ಯಾರ್ಥಿಗಳು ಇನ್ನಷ್ಟು ಪ್ರತಿಭಾವಂತರಾಗಿ ಜಗತ್ತಿನ ಗಮನ ಸೆಳೆಯಲಿದ್ದಾರೆ ಎಂದು ಅವರು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವಿರೇಂದ್ರ ಹೆಗ್ಗಡೆ ಮಾತನಾಡಿ, ಕಳೆದ 10 ವರ್ಷಗಳಲ್ಲಿ ಉನ್ನತ ಶಿಕ್ಷಣ ಕ್ಷೇತ್ರ ಬಹಳಷ್ಟು ಬದಲಾಗಿದೆ. ನಿರ್ವಹಣೆಯಂತಹ ವಿಷಯಗಳಲ್ಲಿ ವಿದ್ಯಾರ್ಥಿಗಳು ಪಠ್ಯ ಓದುವುದರೊಂದಿಗೆ ಪ್ರಾಯೋಗಿಕ ಜ್ಞಾನ ಪಡೆಯುವುದೂ ಅಷ್ಟೇ ಮುಖ್ಯ ಎಂದು ಹೇಳಿದರು.

**6 ಮಂದಿಗೆ ಚಿನ್ನದ ಪದಕ:** ಇದೇ ವೇಳೆ 170 ಹೆಚ್ಚು ವಿದ್ಯಾರ್ಥಿಗಳಿಗೆ ಪಿಜಿ ಡಿಪ್ಲೊಮಾ ಇನ್ ಮ್ಯಾನೇಜ್ಮೆಂಟ್ ಪದವಿ ಪ್ರದಾನ ಮಾಡಲಾಯಿತು. 2019-21ನೇ ಸಾಲಿನಲ್ಲಿ ಗೌರವ್ ಮಹೇಶ್ವರಿ, ಆರ್. ಅಭಿಷೇಕ್, ರಿಷಭ್ ಕುಮಾರ್, ಆಯೆಷಾ ನೇಹಲಾ, ಅಮನ್ ಕುಮಾರ್ ಮತ್ತು ಖುಷ್ಬೂ ರಾಣಿ ಅವರಿಗೆ ಚಿನ್ನದ ಪದಕ ವಿತರಿಸಲಾಯಿತು.

ಎಸ್‌ಡಿಎಂ- ಐಎಂಡಿ ನಿರ್ದೇಶಕ ಡಾ.ಎನ್.ಆರ್. ಪರಶುರಾಮನ್, ಉಪ ನಿರ್ದೇಶಕಿ ಡಾ.ಎಚ್. ಗಾಯತ್ರಿ, ಉದ್ಯಮಿ ಪವನ್ ಜಿ. ರಂಗ, ಡಿ. ಸುರೇಂದ್ರ ಕುಮಾರ್, ಡಾ. ಅನಂತ್ ಕೊಪ್ಪಾರ್, ಡಾ.ಆರ್. ಇಂದಿರಾ, ಡಾ.ಎಸ್.ಎನ್. ಪ್ರಸಾದ್ ಇದ್ದರು.